ಕರ್ನಾಟಕ ಸರಕಾರ

# ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿ

(ಸ್ವಾಯತ್ತ ಸಂಸ್ಥೆ)

ಡಾ॥ ಬಿ.ಆರ್. ಅಂಬೇಡ್ಕರ ರಸ್ತೆ, ಬೆಳಗಾವಿ-590 001 **ದೂರವಾಣಿ ಸಂಖ್ಯೆ: 0831-2421464/2421453,**

**ಫ್ಯಾಕ್ಸ ನಂ 0831-2403126, Website: www.bimsbelgaum.org E.Mail: belgaum.bims@gmail.com**

ಸಂಖ್ಯೆ: ಬಿಮ್ಸ್/ಸಿಬ್ಬಂದಿ(1)/511/2014-15 ದಿನಾಂಕ: 09-01-2017

## ಅಧಿಸೂಚನೆ

**ವಿಷಯ:** ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಶುಶ್ರೂಷಾ ಹುದ್ದೆಗೆ ಆಯ್ಕೆ ಹೊಂದಿದ ಅಭ್ಯರ್ಥಿಗಳ ನೇಮಕಾತಿ ಕುರಿತು.

**ಉಲ್ಲೇಖ:** 1) ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಇವರ ಪತ್ರ ಕ್ರ. ಇಡಿ/ಕೆಇಎ/ಆಡಳಿತ/ಸಿ.ಆರ್-45/2015-16, ದಿನಾಂಕ: 24-10-2016.

2) ಈ ಕಚೇರಿ ಸಮ ಸಂಖ್ಯೆಯ ದಿನಾಂಕ: 11-11-2016 ಹಾಗೂ 06-12-2016 ರ ಪತ್ರಗಳು.

3) ದಿನಾಂಕ: 01-12-2016 ರಂದು ಜರುಗಿದ ಆಡಳಿತ ಮಂಡಳಿಯ ನಡವಳಿಗಳು.

4) ಈ ಕಚೇರಿ ಅಧಿಕೃತ ಜ್ಞಾಪನಾ ಕ್ರ. ಬಿಮ್ಸ್/ಸಿಬ್ಬಂದಿ(1)/511/2014-15, ದಿನಾಂಕ: 09-01-2017.

*********

ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿಗೆ ಮೇಲ್ಕಾಣಿಸಿದ ಉಲ್ಲೇಖಿತ 1 ರನ್ವಯ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು, ಒಟ್ಟು 201 ಹುದ್ದೆಗಳಿಗೆ ಅರ್ಹತಾ ಹಾಗೂ ಮೀಸಲಾತಿಯನ್ವಯ ಅಭ್ಯರ್ಥಿಗಳ ಆಯ್ಕೆ ಪಟ್ಟಿ ಪ್ರಕಟಿಸಲಾಗಿದೆ. ಅದರಂತೆ ಈಗಾಗಲೇ ಈ ಸಂಸ್ಥೆಯಲ್ಲಿ ದಿನಾಂಕ: 14-11-2016 ಮತ್ತು 15-11-2016 ರಂದು ಮೂಲದಾಖಲಾತಿಗಳ ಪರಿಶೀಲನೆ ನಿರ್ವಹಿಸಿ ಅಗತ್ಯ ದಾಖಲಾತಿಗಳ ಛಾಯಾ ಪ್ರತಿಗಳನ್ನು ಪಡೆದುಕೊಂಡು ಅಭ್ಯರ್ಥಿಗಳ ಚಾರಿತ್ರ್ಯ ಪರಿಶೀಲನೆ, ಜಾತಿ ಆದಾಯದ ಸಿಂಧುತ್ವ ಪ್ರಮಾಣ ಪತ್ರ, ಗ್ರಾಮೀಣ ಮತ್ತು ಕನ್ನಡ ಮಾಧ್ಯಮ, ಅಂಗವಿಕಲತೆ, ಯೋಜನಾ ನಿರಾಶ್ರಿತರ ಹಾಗೂ ಹೈದ್ರಾಬಾದ ಕರ್ನಾಟಕ ಸೇರಿದಂತೆ ಅಗತ್ಯ ಪ್ರಮಾಣ ಪತ್ರಗಳ ಸತ್ಯಾಪನೆ ಹಾಗೂ ಸಿಂಧುತ್ವ ಪ್ರಮಾಣ ಪತ್ರಗಳಿಗಾಗಿ ಸಂಬಂಧ ಪಟ್ಟ ಪ್ರಾಧಿಕಾರಗಳಲ್ಲಿ ಈ ಕಚೇರಿ ಸಮ ಸಂಖ್ಯೆಯ ದಿನಾಂಕ: 11-11-2016 ಹಾಗೂ 06-12-2016 ರಂದು ಕೋರಲಾಗಿತ್ತು.

ತದನ್ವಯ ಇದುವರೆಗೂ ಸಂಬಂಧಪಟ್ಟ ಪ್ರಾಧಿಕಾರದಿಂದ ಸ್ವೀಕರಿಸಲಾದ ಅಗತ್ಯ ಪ್ರಮಾಣ ಪತ್ರಗಳನುಸಾರ ಉಲ್ಲೇಖಿತ 4 ರಲ್ಲಿ ನೇಮಕಾತಿ ಆದೇಶ ಹೊರಡಿಸಲಾಗಿದೆ. ಇನ್ನುಳಿದ ಅಭ್ಯರ್ಥಿಗಳಿಗೆ ಸಂಬಂಧಪಟ್ಟಂತೆ ಮೇಲ್ಕಾಣಿಸಿದ ಪ್ರಮಾಣ ಪತ್ರಗಳು ಸ್ವೀಕೃತಿಯ ನಂತರವೇ ಕಾಲಕಾಲಕ್ಕೆ ನೇಮಕಾತಿ ಆದೇಶ ಹೊರಡಿಸಲು ಕ್ರಮ ಜರುಗಿಸಲಾಗುವುದು ಬಾಕಿ ಇರುವ ಅಗತ್ಯ ಪ್ರಮಾಣ ಪತ್ರಗಳಿಗಾಗಿ ಸಂಬಂಧಪಟ್ಟ ಪ್ರಾಧಿಕಾರಿಗಳವರಲ್ಲಿ ನೆನಪೋಲೆಗಳ ಮುಖಾಂತರ ಕೋರಲಾಗಿದೆ. ಕಾರಣ ಅಭ್ಯರ್ಥಿಗಳೂ ಕೂಡ ಸಂಬಂಧಪಟ್ಟ ಪ್ರಾಧಿಕಾರಿಗಳವರನ್ನು ಸಂಪರ್ಕಿಸಿ ಅವಶ್ಯಕ ಸಿಂಧುತ್ವ ಇತರೇ ಪ್ರಮಾಣ ಪತ್ರಗಳ ಸತ್ಯಾಪನೆ ಪತ್ರಗಳನ್ನು ಕೂಡಲೇ ಒದಗಿಸಿಕೊಡಲು ಸೂಚಿಸಿದೆ.

ಈ ವಿಷಯದಲ್ಲಿ ಸಂಸ್ಥೆಯ ಅಂತರ್ಜಾಲ www.bimsbelgaum.org ದಲ್ಲಿ ಪ್ರತಿಯೊಂದು ಮಾಹಿತಿಯನ್ನು ಅಭ್ಯರ್ಥಿಗಳ ಗಮನಕ್ಕೆ ಪ್ರಚುರ ಪಡಿಸಲಾಗುವುದು. ಕಾರಣ ಅಭ್ಯರ್ಥಿಗಳು ಮೇಲ್ಕಾಣಿಸಿದ ಅಂತರ್ಜಾಲದಲ್ಲಿ ಮಾಹಿತಿ ಪಡೆಯುವಂತೆ ತಿಳಿಯಪಡಿಸಿದೆ.

ನಿರ್ದೇಶಕರು,
ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ,
ಬೆಳಗಾವಿ.